<u>ಸಾಕ್ಷಿಯನ್ನು ದಿಃ**25.10.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಲ್.ವಿ.ವಿ. ವಕೀಲರಿಂದ:</u>

ಸರ್ವೇ ನಂ.35 ರಲ್ಲಿ ನನಗೆ 2 ಎಕರೆ ಹಾಗೂ ನನ್ನ ಹೆಂಡತಿ ಪುಷ್ಪ ಹೆಸರಿಗೆ 2 ಎಕರೆ 20 ಗುಂಟೆ ಇದೆ ಎಂದರೆ ಸರಿ. ಸಾಕ್ಷಿಗೆ ಸದರಿ ಆಸ್ತಿಯ ಪಹಣಿಯನ್ನು ಒಪ್ಪಿ ಗುರುತಿಸಿದ ಕಾರಣ, ಸದರಿ ಪಹಣಿಯನ್ನು ನಿಪಿ.**8** ಎಂದು ಗುರುತಿಸಲಾಗಿದೆ. ಸಾಕ್ಷಿಯು ಮುಂದುವರೆದು ತನ್ನ ಹೆಂಡತಿ ಪುಷ್ಪ ತನ್ನ ಜೊತೆಗೆ ಇಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆಃ415/2019 ರಲ್ಲಿನ ದಾವೆಯಲ್ಲಿ ನನಗೆ ನೋಟಿಸು ಜಾರಿಯಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ತಕರಾರು ಸಲ್ಲಿಸಿರುವುದಿಲ್ಲ. ಸದರಿ ದಾವೆಯ ವಿಚಾರಗಳನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ಸದರಿ ದಾವೆಯನ್ನು ಈ ದಾವೆ ಹೂಡಿದ ನಂತರ ಹೂಡಲಾಗಿದೆ ಎಂದರೆ ಸರಿ. ಸದರಿ ದಾವೆ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ಕುರಿತು ತಿಳಿಸಿ ತಕರಾರು ಸಲ್ಲಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ತನ್ನ ಮಗಳು ಭಾಗ ಕೇಳಿದಾಗ ನಾವು ಹಣಕ್ಕಾಗಿ ಕರಾರು ಮಾಡಿಕೊಟ್ಟಿದ್ದೆ ಅದನ್ನು ಬಿಡಿಸಿಕೊಳ್ಳಬೇಕಾಗಿದೆ ಹಾಗಾಗಿ ನೀನು ಕೇಸ್ ಹಾಕಿಕೋ ಎಂದು ತಿಳಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ.

ನಮ್ಮ ಮನೆಯ ಯಜಮಾನಿಕೆಯನ್ನು ನಾನೇ ಮಾಡುತ್ತೇನೆ. ಈ ದಾವೆ ಹೂಡಿದ ವೇಳೆಗೆ ನಾನು ನನ್ನ ಹೆಂಡತಿ ಮಹಾಲಕ್ಷ್ಮೀ ಹಾಗೂ ನನ್ನ ಮಗ ಮತ್ತು ಮಗಳು

ಒಟ್ಟಿಗೆ ಇದ್ದೇವು. ಈ ದಾವೆ ನೋಟಿಸ್ ಬಂದಾಗ ನನ್ನ ಹೆಂಡತಿ ಮಕ್ಕಳಿಗೆ ದಾವೆಯ ವಿಚಾರ ತಿಳಿಯಿತು ಎಂದರೆ ಸರಿ. ನನ್ನ ಮಗಳು ಈ ದಾವೆಗೆ ತನ್ನನ್ನು ಸೇರಿಸಲು ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ನನ್ನ ಮಗಳು ಸಲ್ಲಿಸಿರುವ ದಾವೆಯಲ್ಲಿ ಈ ದಾವೆಯ ವಿಚಾರವನ್ನು ಆಕೆ ಹೇಳಿರುವುದಿಲ್ಲ.

ದಾವಾ ಆಸ್ತಿಯಲ್ಲಿ ವಾದಿಯ ತಂದೆಯ ಸಮಾಧಿ ಎಂದರೆ ಸಾಕ್ಷಿಯು ಜಾಗ ಇರಲಿಲ್ಲ ಎಂದ ಕಾರಣ ಮಾಡಿಕೊಳ್ಳಿ ಎಂದು ಹೇಳಿದ್ದೇವು ಎಂದು ನುಡಿಯುತ್ತಾರೆ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಿ ಸದರಿ 2 ಫೋಟೋಗಳಲ್ಲಿ ದಾವಾ ಆಸ್ತಿಯಲ್ಲಿರುವ ವಾದಿಯ ತಂದೆಯ ಸಮಾಧಿ ಎಂದು ಕಂಡು ಬರುತ್ತದೆ ಎಂಬ ಸೂಚನೆಯನ್ನು ಸಾಕ್ಷಿ ಒಪ್ಪಿ ಗುರುತಿಸಿದ ಕಾರಣ ಅವುಗಳನ್ನು ನಿಪಿ.**9** ಮತ್ತು ನಿಪಿ.**10** ಎಂದು, ಸದರಿ ಫೋಟೋಗಳ ಸಿಡಿಯನ್ನು ನಿಪಿ.**11** ಎಂದು ಗುರುತಿಸಲಾಗಿದೆ.

ನಿಪಿ.1 ರ ದಿನಾಂಕಕ್ಕೂ ಒಂದು ವರ್ಷದ ಮೊದಲೇ ವಾದಿಯಿಂದ ಹಣ ಪಡೆಯಲಾಗಿದೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಅದೇ ದಿನ ಪಡೆಯಲಾಗಿತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಗೆ ದಾವಾ ಆಸ್ತಿಯನ್ನು ಕ್ರಯ ಮಾಡಲು ನಿಪಿ.1ರ ದಿನಾಂಕಕ್ಕೂ ಒಂದು ವರ್ಷದ ಮೊದಲೇ ಕ್ರಯದ ಮಾತುಕತೆಯಾಗಿ ಮುಂಗಡ ಹಣ ಪಡೆದಿದ್ದೇವು ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ವಾದಿಯ ತಂದೆಯ ಸಮಾಧಿಯನ್ನು ದಿನಾಂಕಃ12.08.2016 ರಂದು

ದಾವಾ ಆಸ್ತಿಯಲ್ಲಿ ಮಾಡಲಾಗಿತ್ತು ಎಂದರೆ ಸರಿಯಲ್ಲ.

ಸರ್ವೇ ನಂ.7 ರಲ್ಲಿ ವಾದಿಯ ತಾಯಿಗೆ ಜಮೀನು ಮಂಜೂರಾಗಿದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ ವಾದಿಯ ತಾಯಿಗೆ ಮಂಜೂರಾದ ಜಮೀನು ಇದೆ ಎಂದರೆ ಸರಿಯಲ್ಲ. ವಾದಿಯ ತಾಯಿಗೆ 3 ½ ಎಕರೆ ಜಮೀನು ಮಂಜೂರಾಗಿದೆ. ಸದರಿ ಜಮೀನಿನಲ್ಲಿ ವಾದಿಯ ತಾಯಿ ಶೀಟ್ ನ ಮನೆ ಹಾಕಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದಿಯ ತಾಯಿ ಶೀಟ್ ನ ಮನೆ ಹಾಕಿಕೊಂಡಿದ್ದಾರೆ ಎಂದು ಸೂಚಿಸಿದರೆ ಸಾಕ್ಷಿಯು ಅದು ತಾನು ಹಾಕಿರುವ ಶೀಟ್ ನ ಮನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕು ಬಂದಿಯನ್ನು ವಕೀಲರಿಂದ ಓದಿಸಿ ತಿಳಿದುಕೊಂಡಿರುವುದಿಲ್ಲ.

ನನ್ನ ಮಗಳು ಸಲ್ಲಿಸಿರುವ ದಾವೆಯಲ್ಲಿ ಈ ದಾವೆಯ ವಾದಿಯನ್ನು ಪಕ್ಷಗಾರರನ್ನಾಗಿ ಸೇರಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮಗಳು ಸಲ್ಲಿಸಿದ ದಾವೆಯಲ್ಲಿ ಈ ದಾವೆಯ ವಾದಿ ತನ್ನನ್ನು ಪಕ್ಷಗಾರರನ್ನಾಗಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಕ್ರಯ ಮಾಡಲು ನಿಪಿ1 ರ ದಿನಾಂಕಕ್ಕೂ ಒಂದು ವರ್ಷ ಮೊದಲೇ ಮಾತನಾಡಿ ಮುಂಗಡ ಹಣ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಅದರಂತೆ, ನಾವಿಬ್ಬರು ನಿಪಿ.1 ನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಸಾಕ್ಷಿಯು ಮುಂದುವರೆದು ತಮಗೆ ಹಣದ ಅವಶ್ಯಕತೆ ಇದ್ದುದರಿಂದ ಹಣಕ್ಕಾಗಿ ಮೊದಲೇ ತಯಾರಾಗಿದ್ದ ದಾಖಲೆಗೆ ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ನಿಪಿ.1ರ ವೇಳೆ 2 ವರ್ಷದ ವಾಯಿದೆಯಲ್ಲಿ ಕ್ರಯ ಪತ್ರ ಮಾಡಿಕೊಡುತ್ತೇವೆ ಎಂದು ಒಪ್ಪಿದ್ದೇವು ಎಂದರೆ ಸರಿಯಲ್ಲ. ವಾದಿ ಉಳಿಕೆ ಕ್ರಯದ ಮೊತ್ತವನ್ನು ಪಾವತಿಸಿ ಕ್ರಯ ಪತ್ರ ಬರೆದುಕೊಡುವಂತೆ ಹಲವಾರು ಬಾರಿ ಕೇಳಿದ್ದೇವು ಎಂದರೆ ಸರಿಯಲ್ಲ.

ವಾದಿ ನೋಟಿಸ್ ನೀಡಿದ ನಂತರ ದಾವೆ ಹೂಡುತ್ತಾರೆ ಎಂದು ತಿಳಿದು ಹಣದ ಭದ್ರತೆಗೆ ನಿಪಿ.1 ಬರೆದುಕೊಡಲಾಗಿದೆ ಎಂದು ಕಥೆ ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನನ್ನ ಸಂಬಂಧಿಯಾದ ಕಾರಣ ಅನುಸರಣೆ ಮೇಲೆ ದಾವಾ ಆಸ್ತಿಯ ಸ್ವಾಧೀನಾನುಭವವನ್ನು ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ವಾದಿ ಬಡ್ಡಿಗಾಗಿ ಎಂದು ನನಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ನಾನು ಬಡ್ಡಿ ಪಾವತಿಸಿದ ಕುರಿತು ದಾಖಲೆ ಇರುವುದಿಲ್ಲ. ನಾನು ಹಣ ಸಾಲ ಪಡೆದಿದ್ದರೆ ಆಧಾರ ಪತ್ರ ಮಾಡಿಕೊಡಬೇಕಿತ್ತು ಕರಾರು ಪತ್ರ ಅಲ್ಲ ಎಂದರೆ ಸರಿಯಲ್ಲ. ವಾದಿ ರೂ.35,000/- ಗಳನ್ನು ನ್ಯಾಯಾಲಯದಲ್ಲಿ ಜಮಾ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ನಿಪಿ.1 ಆದ ನಂತರದಿಂದ ಇಲ್ಲಿಯವರೆಗೆ ತನ್ನ ಪಾಲಿನ ಕರಾರಿನ ಅನುಷ್ಠಾನಕ್ಕೆ ಸಿದ್ಧರಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಾನು ಸಿದ್ದನಿಲ್ಲ ಎಂದು ನುಡಿಯುತ್ತಾರೆ. ನಿಡಿ.8, 10 ಮತ್ತು 11 ದಾವಾ ಆಸ್ತಿಯದ್ದಲ್ಲ ಎಂದರೆ ಸರಿಯಲ್ಲ.

ನಮ್ಮ ಪಿತ್ರಾರ್ಜಿತ ಆಸ್ತಿಗಳು ನಮ್ಮ ಸಹೋದರರ ನಡುವೆ ಇಂದಿಗೂ ವಿಭಾಗ ಆಗಿಲ್ಲ ಎಂದರೆ ಸರಿ. ನಮ್ಮ ಪಿತ್ರಾರ್ಜಿತ ಆಸ್ತಿ 10 ಎಕರೆ ಇರಬಹುದು. ಸದರಿ ಆಸ್ತಿಗಳು ನಮ್ಮ ದೊಡ್ಡಪ್ಪ ತಿಮ್ಮೇಗೌಡರ ಹೆಸರಿನಲ್ಲಿವೆ. ನಾನು ಇದುವರೆಗೆ ವಿಭಾಗ ಕೋರಿ ಯಾವುದೇ ದಾವೆ ಹೂಡಿರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡುವ ಉದ್ದೇಶದಿಂದ ವಾದಿ ಹಣ ಪಾವತಿಸಿ ನಿಪಿ.1 ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ಮಗಳ ಕಡೆಯಿಂದ ದಾವೆ ಹೂಡಿಸಿದ್ದು, ಆ ದಾವೆಯಲ್ಲಿ ನಾನು ಉದ್ದೇಶಪೂರ್ವಕವಾಗಿ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯ ಮೇಲೆ ಪ್ರಾಪ್ತವಾಗಿರುವ ಹಕ್ಕನ್ನು ಕಸಿದುಕೊಳ್ಳಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.